http://www.howtoexam.com

**DK 03**

**ಪಿ.ಯು.ಸಿ. ನಂತರದ ಕನ್ನಡ ಡಿಪ್ಲೊಮಾ ಪರೀಕ್ಷೆ, ಆಗಸ್ಟ್ 2009**

**ಪತ್ರಿಕೆ - 3 : ಹಳಗನ್ನಡ ಪದ್ಯಗಳು ಮತ್ತು ಛಂದಸ್ಸು**

**(ಹೊಸ ಪಠ್ಯಕ್ರಮ)**

ಕಾಲ : 3 ಗಂಟೆಗಳು ಗರಿಷ್ಠಾಂಕಗಳು : 100

**ಎ - ವಿಭಾಗ**

**ಹಳಗನ್ನಡ ಪದ್ಯಗಳು (60 ಅಂಕಗಳು)**

**(ಪಂಪಭಾರತ : 12 ಮತ್ತು 13ನೇ ಆಶ್ವಾಸ ಮತ್ತು ವಡ್ಡಾರಾಧನೆ)**

1. ಯಾವ ಪದ್ಯವನ್ನೂ ಬಿಡದೆ **ಎರಡರ** ಭಾವವನ್ನು ಸಂದರ್ಭ ಸಹಿತ ವಿವರಿಸಿ. **(5×2=10)**

1.1) ಕಾಶ್ಯಪಿಯೆಂಬೊಳೆನಗೆ ತಂಗೆಯಿಲ್ಲ ಸೋಮಶರ್ಮನೆಂಬೊಂ –
ಮಯ್ದುನನುಮಿಲ್ಲ ಸೂರ್ಯಮಿತ್ರನೆಂಬ ಪೆಸರೆನಗುಂಟು
ನಿಮ್ಮ ಮಾವನಪ್ಪ ಸೂರ್ಯಮಿತ್ರನಲ್ಲೆಂದವರ್ಗ್ಗೆ ನುಡಿದುಂ
ಮತ್ತಮಿಂತೆಂದಂ ನಿಮಾರ್ಗ್ಗೆ ದೊಡಮೇಂ ವಿದ್ಯಾರ್ಥಿಗಳಾಗಿ –
ಯೋದಂ ಕಲ್ವೆಮೆಂಬಟ್ಟೆಯೊಳ್ ಬಂದಿರಪ್ಪೊಡೆ
ಬೈಕಂದಿರಿದು ಕಪ್ಪಡಮುಟ್ಟಿರುಳುಂ ಪಗಲುಮಲಸದೆ
ನಿರ್ಬಂಧದಿಂದೋದಲಾರ್ಪೊಡೆ ನಿಮ್ಮನೋದಿಸಲಕ್ಕುಂ ....

1.2) ದೇವಾ ನಾಂ ಕಳ್ಳನಲ್ಲದುದರ್ಕೆ ಪೊಟಲೆಲ್ಲಮಱಗುಂ
ಕಳ್ಳನನಾರಯ್ಯಲಾಱದೆನ್ನಂ ತನ್ನ ಸಾವಿಗಂಜಿ ಒಡವನಂ ದೇಸಿಗನಂ
ಪೊಟಲೊಳ್ ಬೈಕಂದಿರಿದುಂಡು ಬಾಟ್ವಿನಂ ಪಿಡಿದುಕೊಂಡು
ಬಂದು ಕೊಲಿಸಿದಪ್ಪನೆಂದೊಡೆ ತಳಾಱಂ ಕಳ್ಳರನಾರಯ್ವ
ಶಾಸ್ತ್ರಂಗಳೊಳಾದಮಾನುಂ ಕುಶಲನಪ್ಪುದಱಿಂದರ
ತನ್ನ ರೂಪುಗರೆದಿರುಳ್ ಪೊಟಲೆಲ್ಲಮಂ ಕಳ್ದು ದಿವಸಕ್ಕೀ
ಪಾಂಗಿನೊಳ್ ತೊನ್ನನಾಗಿರ್ಪೊಂ ನೀಮುಂ ನಂಬದಾಗಳ್
ಪ್ರತ್ಯಯಮಂ ಮಾಡಿ ತೋರ್ಪೆನ್ ....

1.3) ನೆನೆಯದಿರಣ್ಣ ಭಾರತದೊಳಿಂ ಪೆಱರಾರುಮನೊಂದೆ ಚಿತ್ತದಿಂ
ನೆನೆವೊಡೆ ಕರ್ಣನಂ ನೆನೆಯ ಕರ್ಣನೊಳಾರ್ ದೊರೆ ಕರ್ಣನೇಱು ಕ
ರ್ಣನ ಕಡು ನನ್ನಿ ಕರ್ಣನಳವಂಕದ ಕರ್ಣನ ಚಾಗಮೆಂದು ಕ
ರ್ಣನ ಪಡೆಮಾತಿನೊಳ್ ಪುದಿದು ಕರ್ಣರಸಾಯನಮಲ್ತೆ ಭಾರತಂ

**P.T.O.**

Placement paper, University exam paper, entrance exam and school question paper

http://www.howtoexam.com



1.4) ಕಡಲಂ ಪೊಕ್ಕೊಡೆ ಪೀರ್ದಪೆಂ ಕಡಲನಾ ಪಾತಾಳಮಂ ಪೊಕ್ಕನ
ಪ್ಪೊಡೆ ಶೇಷಾಹಿಯ ಪಲ್ಗಳಂ ಮುಱಿದಪೆಂ ಬ್ರಹ್ಮಾಂಡಮಂ ಪೊಕ್ಕನ
ಪ್ಪೊಡಮಾ ಬ್ರಹ್ಮನ ಗಂಟಲಂ ಮುಱಿದಪೆಂ ದುರ್ಯೋಧನಂಗಿಂ ಪುಗ
ಲ್ಕೆಡೆ ತ್ರೈಭೂ ಭುವನಂಗಳಿಂ ಪೊಱಗೆ ಮತ್ತೆಲ್ಲಿತ್ತೊ ಬಾಣಾಂತಕಾ.

2. 2.1) **ಎಂಟು** ಪದಗಳಿಗೆ ಅರ್ಥ ಬರೆಯಿರಿ : $(8\times\frac{1}{2}=4)$

ಕೂರ್ಮೆ, ಓಜ, ನನ್ನಿ, ಕುಂಜರ, ಕೇತನ, ಕಸವರ, ವರೂಥ, ಸಾಯಕ, ಬಟ್ಟೆ, ಪೊಟಿಲ್, ಪಾಂಗು, ಚಾಗ.

2.2) **ಮೂರನ್ನು** ಕುರಿತು ಟಿಪ್ಪಣಿ ಬರೆಯಿರಿ : (3×2=6)

ಸರ್ವರುಜಾಪಹಾರ, ಕಾಶ್ಯಪಿ, ವೈಶಂಪಾಯನ ಸರೋವರ, ಶಲ್ಯ, ತಳಾಱಂ, ಅಣುವ್ರತಗಳು.

3. **ನಾಲ್ಕು** ವಾಕ್ಯಗಳನ್ನು ಸಂದರ್ಭ ಸಹಿತ ವಿವರಿಸಿ : $(4\times\frac{1}{2}=10)$

3.1) ಕಳ್ಳಂಗೆ ತಕ್ಕ ನಿಗ್ರಹಮಂ ನಿನಗೆ ಮಾಡಿದಪ್ಪೆನ್

3.2) ಭಟ್ಟರಾ ಆದೇಂ ಭವ್ಯ ಜೀವನೊ ಅಭವ್ಯ ಜೀವನೊ

3.3) ಈ ಲೋಕದೊಳೀತನೆ ಪರಮಾರ್ಥ ಸುಖಿ

3.4) ಮುಕ್ತಿಶ್ರೀಯೆಂಬೊಳ್ ಪೆಂಡತಿಗೆ ಬೇಟಂಗೊಂಡಿರ್ದನ್

3.5) ಸಾಮಾನ್ಯಮೇ ಬಗೆಯೆ ಭವತ್ಕ್ಲೇಶಪಾಶ ಪ್ರಪಂಚಂ

3.6) ಎನ್ನ ಸರಂಗೇಳ್ದಲ್ಲದೀ ಭೂತು ಪೊಱಮಡುವನಲ್ಲನ್.

**ಬಿ – ವಿಭಾಗ**

4. 'ಅಗ್ನಿಭೂತಿ ವಾಯುಭೂತಿಯರು ಒಡಹುಟ್ಟಿದವರಾದರೂ ಸ್ವಭಾವದಲ್ಲಿ ಬೇರೆ ಬೇರೆ'– ವಿಚಾರಮಾಡಿ. **10**

**ಅಥವಾ**

ವಿದ್ಯುಚ್ಚೋರ ಮತ್ತು ಯಮದಂಡರ ಪ್ರತಿಜ್ಞೆ ಏನು ? ವಿದ್ಯುಚ್ಚೋರ ಗೆಲುವು ಸಾಧಿಸಿಕೊಂಡ ಬಗೆಯನ್ನು ಬರೆಯಿರಿ.

5. ಭೀಮ–ದುರ್ಯೋಧನರ ಕಾಳಗವನ್ನು ಕುರಿತು ಬರೆಯಿರಿ. **10**

**ಅಥವಾ**

ಕರ್ಣನ ವ್ಯಕ್ತಿತ್ವ ಪಂಪಭಾರತದಲ್ಲಿ ಹೇಗೆ ಮೂಡಿ ಬಂದಿದೆ ವಿವರಿಸಿ.

6. ಅ) **ಒಂದನ್ನು** ಕುರಿತು ಟಿಪ್ಪಣಿ ಬರೆಯಿರಿ : **5**

ನಾಗಶ್ರೀ, ಯಮದಂಡ, ಶಿವಕೋಟ್ಯಾಚಾರ್ಯ

ಆ) **ಒಂದನ್ನು** ಕುರಿತು ಟಿಪ್ಪಣಿ ಬರೆಯಿರಿ : **5**

ಭೀಷ್ಮ, ಕರ್ಣನ ವೀರ ಪಟ್ಟಾಭಿಷೇಕ, ದುರ್ಯೋಧನ

Placement paper, University exam paper, entrance exam and school question paper

http://www.howtoexam.com



## ಛಂದಸ್ಸು (40 ಅಂಕಗಳು)

7. ವರ್ಣಗಣ ಮತ್ತು ಮಾತ್ರಾಗಣಗಳ ಸ್ವರೂಪವನ್ನು ಸೋದಾಹರಣ ವಿವರಿಸಿ. **10**

**ಅಥವಾ**

ಖ್ಯಾತ ಕರ್ನಾಟಕಗಳು ಯಾವುವು ? ಉದಾಹರಣೆಗಳೊಡನೆ ವಿಶದಪಡಿಸಿ.

8. ಕಂದ ಪದ್ಯದ ಉಗಮ, ಲಕ್ಷಣ ಮತ್ತು ಪ್ರಾಮುಖ್ಯಗಳನ್ನು ತಿಳಿಸಿ. **10**

**ಅಥವಾ**

ಹೊಸಗನ್ನಡ ಛಂದಸ್ಸಿನ ವೈಶಿಷ್ಟ್ಯವೇನು ? ವಿವರಿಸಿ.

9. **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ : **(5×2=10)**

9.1) ಸಾಂಗತ್ಯ

9.2) ತ್ರಿಪದಿ

9.3) ಅನಾಗತ

9.4) ಮುಡಿ.

10. **ಎರಡು** ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಂಗಡಿಸಿ ಪದ್ಯಜಾತಿಯ ಹೆಸರನ್ನು ತಿಳಿಸಿ. **(5×2=10)**

10.1) ನೆತ್ತಮನಾಡಿ ಭಾನುಮತಿ ಸೋಲ್ತೊಡೆ ಸೋಲಮನೀವುದೆಂದು ಕಾ

10.2) ಅನೃತಂ ಲೋಭಂ ಭಯಮಂ
ಬಿನಿತುಂ ನೀನಿರ್ದ ನಾಡೊಳಿರ್ಕುಮೆ ರವಿ ನಂ

10.3) ಮೇಲೊಂದು ಗರುಡ ಹಾರುತಿಹುದು
ಕೆಳಗದರ ನೆರಳು ಓಡುತಿಹುದು

10.4) ಎಚ್ಚರೆಚ್ಚರು ಮಾದ ಮೂಜಗದ ಸಿಂಗಾರ
ಮನ ಮನದ ಬಂಗಾರ ಎಚ್ಚರೈ ಏಳೈ .

———————————

Placement paper, University exam paper, entrance exam and school question paper